ಇ) ಒಟ್ಟು 12 ಲಕ್ಷ ರೂ.ಗಳು

1997-98ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿರುವ ಯೋಜನೆಗಳ ವಿವರಗಳು

(1) ಮುಡುಕುತೊರೆ ವಿತ ನೀರಾವರಿ ಯೋಜನೆ ಎರಡನೇ ಹಂತ

ಈ ಯೋಜನೆಯ ಅಂದಾಜು ಪಟ್ಟಿಯನ್ನು ರೂ. 130.00 ಲಕ್ಷಗಳಿಗೆ 1988-89ರಲ್ಲಿ ಮಂಜೂರಾಗಿದ್ದು, 810 ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ. ಇನ್‌ಟೇಕ್ ಕಾಲುವೆ ಮತ್ತು ಏರು ಕೊಳವೆಯ ಮಣ್ಣಿನ ಅಗೆತದ ಕೆಲಸವು ಭಾಗಶಃ ಮುಗಿದಿದೆ. ಯಂತ್ರಾಗಾರದ ಮನೆ, ಯಂತ್ರಗಳು ಹಾಗೂ ನೀರು ವಿತರಣಾ ವ್ಯವಸ್ಥೆ ಆಗಬೇಕಾಗಿದೆ. 1997-98ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಇದುವರೆವಿಗೂ ರೂ. 14.75 ಲಕ್ಷಗಳು ವೆಚ್ಚವಾಗಿರುತ್ತದೆ. ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ರೂ. 5.00 ಲಕ್ಷಗಳ ಅನುದಾನ ಇರುತ್ತದೆ. ಉಳಿದ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

(2) ತಲಕಾಡು ವಿತ ನೀರಾವರಿ ಯೋಜನೆ :

ಈ ಯೋಜನೆಯ ರೂ. 31.00 ಲಕ್ಷಗಳ ಅಂದಾಜು ಪಟ್ಟಿ 1988-89ರಲ್ಲಿ ಮಂಜೂರಾಗಿದ್ದು,

ಈ ಯೋಜನೆಯಿಂದ 188 ಹೆಕ್ಟೇರು ಜಮೀನಿನ ನೀರನ್ನು ಒದಗಿಸಲು ಉದ್ದೇಶಿಸಲಾಗಿದೆ. ಇನ್‌ಟೇಕ್ ಫೈಪ್ ಲೈನ್ ಮತ್ತು ಜಾಕ್‌ವೆಲ್‌ನ ಮಣ್ಣಿನ ಅಗೆತದ ಕೆಲಸ ಭಾಗಶಃ ಮುಗಿದಿದೆ. ಪಂಪುಮನೆ ನೀರಿನ ತೊಟ್ಟಿ ಮತ್ತು ಪಂಪ್ ಆಪರೇಟರ್ ಕ್ವಾರ್ಟರ್ಸ್ ಪೂರ್ಣಗೊಳ್ಳುವ ಹಂತದಲ್ಲಿದೆ. ಇದುವರೆವಿಗೆ ರೂ. 6.75 ಲಕ್ಷಗಳು ವೆಚ್ಚವಾಗಿರುತ್ತದೆ. 1997-98ನೇ ಸಾಲಿನಲ್ಲಿ, ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ರೂ. 3.00 ಲಕ್ಷಗಳ ಅನುದಾನವಿರುತ್ತದೆ. ಉಳಿದ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

3) ಮೇಧಿನಿ ವಿತ ನೀರಾವರಿ ಯೋಜನೆ :

ಈ ಯೋಜನೆಯು ರೂ. 55.00 ಲಕ್ಷಗಳಿಗೆ 1988-89ರಲ್ಲಿ ಮಂಜೂರಾಗಿದ್ದು, ಇದರಿಂದ 405 ಹೆಕ್ಟೇರು ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ. ಈ ಯೋಜನೆಯ ಇನ್‌ಟೇಕ್ ಜಾಕ್‌ವೆಲ್, ಏರುಕೊಳವೆಯ ಮಣ್ಣಿನ ಅಗೆತ ನೀರಿನ ತೊಟ್ಟಿ ಕೆಲಸಗಳು ಪ್ರಗತಿಯಲ್ಲಿದೆ. ಈ ಯೋಜನೆಗೆ ಇದುವರೆವಿಗೂ ರೂ. 9.10 ಲಕ್ಷ ರೂ.ಗಳು ವೆಚ್ಚವಾಗಿರುತ್ತದೆ. ಉಳಿದ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.

ಯಾದಗಿರಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕೆರೆಗಳ ದುರಸ್ತಿ

2527 - ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಯಾದ್ಗೀರ್ ತಾಲ್ಲೂಕಿನಲ್ಲಿ ಮಳೆಯ ಹಾನಿಯಿಂದ ನೀರಾವರಿ ಕೆರೆಗಳು ಒಡೆದುಹೋಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಎಷ್ಟು ಕೆರೆಗಳು ಒಡೆದು ಹೋಗಿವೆ;

ಇ) ಒಡೆದುಹೋಗಿರುವ ಈ ನೀರಾವರಿ ಕೆರೆಗಳನ್ನು ದುರಸ್ಥಿ ಮಾಡಿ ನೀರಿನ ಸಂಗ್ರಹಕ್ಕೆ ಅನುಕೂಲವಾಗುವಂತಹ ಕ್ರಮವನ್ನೇನಾದರೂ ಸರ್ಕಾರ ತೆಗೆದುಕೊಂಡಿದೆಯೇ?

ಈ) ಈ ಕೆರೆಗಳ ದುರಸ್ಥಿಗಾಗಿ ಸರ್ಕಾರದವರು ಬಿಡುಗಡೆ ಮಾಡಿರುವ ಹಣವೆಷ್ಟು?

ಉ) ಈ ಕೆರೆಗಳ ದುರಸ್ಥಿಯ ಕಾಮಗಾರಿಯನ್ನು ಎಂದು ಪ್ರಾರಂಭ ಮಾಡಲಾಗುವುದು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು):

ಅ) ಬಂದಿದೆ.

ಆ) 12 ಕೆರೆಗಳು

ಇ) ಈ ಸಾಲಿನಲ್ಲಿ ದುರಸ್ಥಿ ಕೆಲಸವನ್ನು ಕೈಗೊಳ್ಳಲಾಗುವುದು

ಈ) 5.00 ಲಕ್ಷ ರೂ.ಗಳು

ಉ) ಶೀಘ್ರವಾಗಿ ಪ್ರಾರಂಭಿಸಲಾಗುವುದು.

ವರಾಹಿ ಯೋಜನೆಗೆ ಕಂದಾಯ ಇಲಾಖೆಯಿಂದ ಕೊಟ್ಟಿರುವ ಭೂಮಿ

2431 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವರಾಹಿ ವಿತ ನೀರಾವರಿಯಲ್ಲಿ ಕಂದಾಯ ಖಾತೆಯವರು ನೀರಾವರಿ ಇಲಾಖೆಗೆ ಬಿಟ್ಟುಕೊಡುವ ಭೂಮಿ ಎಷ್ಟು?

ಆ) ಇದರಲ್ಲಿ ಕುಷ್ಕಿ ಭೂಮಿ ಎಷ್ಟು ಮತ್ತು ಪಟ್ಟಾ ಭೂಮಿ ಎಷ್ಟು?

ಇ) ಕುಷ್ಕಿ ಭೂಮಿಯಲ್ಲಿ ಸ್ವಾಧೀನ ಮಾಡಿಕೊಳ್ಳಲು ಕ್ರಮ ಕೈಗೊಳ್ಳಲಾಗಿದೆಯೆ?

ಈ) ವರಾಹಿ ವಿತ ನೀರಾವರಿ ಯೋಜನೆಯ ಕಾಲುವೆಗೋಸ್ಕರ ನೀರಾವರಿ ಇಲಾಖೆ ಕೇಳಿದ ಅರಣ್ಯ ಭೂಮಿ, ಕಂದಾಯ ಇಲಾಖೆ ಭೂಮಿ ಪಟ್ಟಾ ಮತ್ತು ಕುಷ್ಕಿ ಭೂಮಿಗಳ ಕಾಲುವೆ ಅಗಲದಲ್ಲಿ ವ್ಯತ್ಯಾಸ ಇದೆಯೇ;

ಉ) ಇದ್ದಲ್ಲಿ ಸಮರ್ಪಕ ಕಾರಣವೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) ವರಾಹಿ ವಿತ ನೀರಾವರಿ ಯೋಜನೆಗಾಗಿ ಒಟ್ಟು 89.80 ಹೆಕ್ಟೇರ್ ಭೂಮಿಯ ಅವಶ್ಯಕತೆ ಇದ್ದು ಅದರಲ್ಲಿ ಕಂದಾಯ ಖಾತೆಯವರು 45.08 ಹೆಕ್ಟೇರ್ ಬಿಟ್ಟುಕೊಡುವ ಭೂಮಿ ಆಗಿರುತ್ತದೆ.

ಆ) ಇದರಲ್ಲಿ ಕುಷ್ಕಿ ಭೂಮಿಯ 45.08 ಹೆಕ್ಟೇರ್‌ಗಳಲ್ಲಿ ಇಲ್ಲಿಯವರೆಗೆ 34.08 ಹೆಕ್ಟೇರ್ ಭೂಮಿಯನ್ನು ನೀರಾವರಿ ಇಲಾಖೆಗೆ ಕೊಡಲಾಗಿದೆ. ಉಳಿಕೆ 11.00 ಹೆಕ್ಟೇರ್ ಕುಷ್ಕಿ ಭೂಮಿ ಕೊಡಬೇಕಾಗಿದೆ. ಪಟ್ಟಾಭೂಮಿ ಒಟ್ಟು 44.72 ಹೆಕ್ಟೇರ್‌ಗಳು ಇರುತ್ತದೆ.

ಇ) ಹೌದು

ಈ) ಕಾಲುವೆ ವಿನ್ಯಾಸಕ್ಕೆ ಅನುಗುಣವಾಗಿ ಕಾಲುವೆ ಅಗಲದಲ್ಲಿ ವ್ಯತ್ಯಾಸ ಮಾಡಿದೆಯೇ ವಿನಹ ಭೂಮಿಗೆ ತಕ್ಕಂತೆ ವ್ಯತ್ಯಾಸ ಮಾಡಿರುವುದಿಲ್ಲ.

ಉ) ಕಾಲುವೆಯ ಸೆಕ್ಷನ್‌ಗಳನ್ನು ವಿನ್ಯಾಸ ಮಾಡುವಾಗ ಕಾಲುವೆಯಲ್ಲಿ ಹರಿಯುವ ನೀರಿನ ಪ್ರಮಾಣ ಕಾಲುವೆಯ ಪಾರ್ಶ್ವ ಇಳಿಜಾರು ಮತ್ತು ಕಾಲುವೆಯ ನಾಲಾ ಪಥದ ಉದ್ದಕ್ಕೆ ಕಾಲುವೆಯ ಅಗೆತದ ಎತ್ತರ ವ್ಯತ್ಯಾಸವಿರುವಾಗ ಕಾಲುವೆಯ ಅಗಲವೂ ಕೂಡ ಹೆಚ್ಚು ಕಡಿಮೆಯಾಗಿರುತ್ತದೆ.